ಕಾಲೇಜಿನ್ಯಾಗ ಎರಡು ಮೂರು ಸರ್ತಿ ನೋಡಿದೀನಿ. ಸಮಾರಂಭ ಇದ್ದಾಗ ಬಂದಿದ್ರು. ನಾನು ನಮಸ್ಕಾರ ಮಾಡಿದ್ದಿನಷ್ಟೆ. ಮಾತಾಡಿಸುವ ಸಂದರ್ಭ ಬರಲಿಲ್ಲ' ಎಂದು ಶಿವದೇವಿ ನೋಡಿದಳು. ಬಹುಶಃ ಇದೆಲ್ಲ ಯಾಕೆ ಕೇಳ್ತಿದ್ದಾರೆ ಎಂದು ಅನ್ನಿಸಿತ್ತೇನೋ..!

'ಅಪ್ಪ ನಿನ್ನನ್ನು ಬಹಳ ಹಚ್ಚಿಕೊಂಡಿದ್ದರೇನು?' ವೇದವತಿಯ ಈ ಮಾತಿಗೆ ಶಿವದೇವಿ ಮಾತಾಡಲಿಲ್ಲ. ದುಃಖ ಒತ್ತಿ ಬಂದಂತಾಯ್ತು. ಮುಖಕ್ಕೆ ಬೊಗಸೆ ಕೈ ಒತ್ತಿಕೊಂಡಳು. ವೇದವತಿಯೂ ಸುಮ್ಮನಾದಳು.

ಶಿವದೇವಿ ಒತ್ತಿ ಬಂದ ದುಃಖವನ್ನು ನಿಯಂತ್ರಿಸಿಕೊಂಡಳು.

'ತ್ರಾಸ್ ಆದ್ರೆ ಈ ಮಾತುಗಳು ಬ್ಯಾಡಬುಡಿ ಶಿವು' ಎಂದಳು ವೇದವತಿ.

'ಪರ್ವಾಗಿಲ್ಲಕ್ಕ, ಆದ್ರೆ ಸರ್ ನನ್ಗ ಬಾಳ ಸಹಾಯ ಮಾಡ್ತಿದ್ರಕ್ಕ' ಎಂದಳು.

'ಸಹಾಯ ಅಂದ್ರ... ಏನು?'

'ನಾನು ಬಡವಿ ಅಂಬೋದು ಅವರಿಗೆ ಸಹಿಸಲಾಗಲಿಲ್ಲ. ನನ್ನ ಮದುವೆ ಆಗದಿರುವುದು ಅವರಿಗೆ ಚಿಂತೆಯಾಗಿತ್ತು ಅಂತ ಅನಸ್ತದ. ಹಾಗಾಗಿ ಚಿಕ್ಕ ಚಿಕ್ಕ ಸಹಾಯ ಮಾಡುತ್ತ ಬಂದ್ರು. ನನ್ಗೆ ಮೊದಮೊದ್ಲು ಮುಜುಗರವಾಗುತ್ತಿತ್ತು. ನಂತರ ದೇವರ ಪ್ರಸಾದ ಎಂದು ಭಾವಿಸಿದೆ.'

'ನಿನ್ನ ಈ ಮನಿಗೆ ಬರ್ತಿದ್ರೇನು?'

'ಇಲ್ಲಕ್ಕೂ ಒಂದು ವರ್ಷವಾದ್ರೂ ಸರ್ ನನ್ನ ಮನಿಗೆ ಬರ್ಲಿಲ್ಲ...'

'ಆಮೇಲೆ ಬಂದ್ರೇನು?'

'ನನ್ನ ಆರೋಗ್ಯ ತಪ್ಪಿದಂತಾಗಿತ್ತಕ್ಕ. ಆಗ ಬಂದಿದ್ರು ಒಮ್ಮೆ. ನಾನು ಆಸ್ಪತ್ರೆಗೆ ಹೋಗಿದ್ದೆ. ನನ್ಗ ಫೋನ್ ಮಾಡಿದ್ರು. ಸರ್ಕಾರಿ ಆಸ್ಪತ್ರೆಯಲ್ಲಿದ್ದೇನೆ ಸರ್ ಎಂದು ಹೇಳಿದೆ. ಅಲ್ಲಿಗೆ ಆಟೋದಲ್ಲಿ ಬಂದ್ರು.

'ಇಲ್ಲಿಗ್ಯಾಕ ಬರಕೋಗಿದ್ರಿ? ಬರ್ರಿ ನಾನು ಕರಕಂಡು ಹೋಗ್ತೀನಿ' ಎಂದು ಮತ್ತೊಂದು ಆಟೋದಲ್ಲಿ ಕರೆದುಕೊಂಡು ಆಯುರ್ವೇದ ಆಸ್ಪತ್ರೆಗೆ ಹೋದರು. ಅಲ್ಲಿದ್ದ ಡಾಕ್ಟರ್ ಅಪ್ಪನವರಿಗೆ ಗೆಳೆಯರಂತೆ. ಚೆಕ್ ಮಾಡ್ಸಿದ್ರು. 'ಯಾವಾಗಾದ್ರೂ ಆರೋಗ್ಯ ಸರಿಯಿರದಿದ್ರ ಇಲ್ಲಿಗೆ ಬರ್ರಿ' ಎಂದು ನನ್ನನ್ನು ಪರಿಚಯಿಸಿದ್ರು...'

'ಹೌದು. ನಮ್ಮ ಕುಟುಂಬದ ಡಾಕ್ಟರ್ ಚಂದ್ರಯ್ಯ ಅವರಿರಬೇಕು'

'ಹೌದಕ್ಕ ಅವರೆ'

'ಮತ್ತೆ ಇನ್ನೊಮ್ಮೆ ಯಾವಾಗದ್ರೂ ಬಂದಿದ್ರೇನು?'

'ಹ್ಞಾ... ಇಲ್ಲಕ್ಕ'

'ಸಹಾಯ ಮಾಡ್ತಿದ್ರು ಅಂತೇಳಿದಿ. ಯಾವ ರೀತಿ ಸಹಾಯ...'

'ಅಕ್ಕ, ನಿಮ್ಗ ಹೇಳಿದ್ರ ನಗು ಬರ್ತದ. ಉಡುಗೆ-ತೊಡುಗೆ-ಹಣ ಇವುಗಳನ್ನು ಬಿಟ್ಟು, ನನ್ಗ ಅನ್ನ-ನೀರು ಕೊಟ್ಟಾರಕ್ಕ...' ಮತ್ತೆ ಕಣ್ಣೀರು ತಂದಳು.



'ಶಿವು, ನಿನ್ನ ಅಪ್ಪ ಮಗಳಂತ ನೋಡಿದ್ರಾ ಅಥವಾ ಅದನ್ನ ಮೀರಿ...'

'...'

'ನಾನು ಇದನ್ನೆಲ್ಲ ಕೇಳ್ತಿರೋದು ನಿನ್ನ ಅವಮಾನ ಮಾಡಕ್ಕಲ್ಲ. ತೊಂದರೆ ಕೊಡಕ್ಕೂ ಅಲ್ಲ. ಆರೋಪ ಹೊರಿಸೋಕೂ ಅಲ್ಲ. ಈ ಸಲ ಬಂದಿದ್ದೀನಲ್ಲ ಇನ್ನೊಂದು ಸಲ ನಾನೂ ಬರುವುದೂ ಇಲ್ಲ. ನಿನ್ನ, ಅಪ್ಪನಿಗೆ ಯಾವ ಕಳಂಕ ಬರಬಾರದೂಂತ. ಎಲ್ಲ ನನ್ನ ಅರಿವಿಗಾಗಿ ಕೇಳ್ತಿದ್ದೀನಿ. ನಾನೂ ಹೆಣ್ಣು'.

'ಅಕ್ಕ, ಅಮ್ಮ ಸಾಯುವತನಕ ನನ್ನನ್ನು ಮಗಳಂತೆ ಕಂಡರು ಎಂದು ನಾನು ತಿಳಿದಿದ್ದೀನಿ. ಅಮ್ಮ ಸತ್ತ ನಂತರ ಸರ್‌ಗೆ ನನ್ನ ಮ್ಯಾಲಿನ ಪ್ರೀತಿ ಬ್ಯಾರೆ ರೀತಿ ಬದಲಾಯ್ತು. ಅವ್ರು ಜನಕ್ಕೂ ಅಂಜೋರು, ತಮ್ಮ ಮನಕ್ಕೂ ಅಂಜೋರು. ಈ ಇಕ್ಕಟ್ಟಿನಲ್ಲಿ ನನ್ನ ಮ್ಯಾಲಿನ ಅವರ ಪ್ರೀತಿ ಮೋಹಕ್ಕೆ ತಿರುಗಿತು. ನನ್ನಲ್ಲಿ ಅದೇನು ಕಂಡರೋ ನನಗಂತೂ ತಿಳಿದಿಲ್ಲ. ಸಂಗಾತಿಯನ್ನಾಗಿ ಮಾಡಿಕೊಳ್ಳಬೇಕು ಅಂತ ಅವರಿಗೆ ಅನ್ನಿಸಿಬಿಟ್ಟಿತು. ಆದ್ರೆ ಅದನ್ನ ನನ್ಗ ಒಡೆದು ಬೇಗ ಹೇಳಲಿಲ್ಲ. ಅಕ್ಕ, ಇನ್ನೊಂದು ಹೇಳ್ತೀನಿ. ಅವರು ನನ್ನನ್ನು ಸಂಗಾತಿಯನ್ನಾಗಿ ಮಾಡಿಕೊಳ್ಳುವ ಇಚ್ಛೆಯನ್ನು ಹೊಂದಿದ್ರೂ ನನ್ಗ ಅದು ಪೂರ್ಣ ನಿಜ ಎಂದು ತಿಳಿಯಲಿಲ್ಲ. ಒಂದು ದಿನ ಮನೆಗೆ ಬಂದ್ರು. ಅದೇ ಕೊನೆಯಾಯ್ತು. ಬಂದ್ರು 'ಶಿವು, ನನ್ಗ ವಯಸ್ಸಾಯ್ತು ಅಂತನೇ ತಿಳಿ. ಆದ್ರೂ ನಿನ್ನನ್ನು ಮದುವೆ ಆಗ್ತೀನಿ.